ರಾತ್ರಿ ಬಸವಣ್ಣನ ಶಯನ ಕಕ್ಷೆಗೆ ನುಸುಳಿ, ಅವರ ಪತ್ನಿಯ ಓಲೆಗಳನ್ನು ಕಳವು ಮಾಡಿದಾಗ ಅಣ್ಣನವರು ಹೀಗೇ ಹೇಳಿದ್ದರು.

ಒಮ್ಮೆ ಗಚ್ಚಿನ ಮಠದಲ್ಲಿ ಬಸವಪುರಾಣದ ಪ್ರವಚನ ಬಹಳ ಚೆನ್ನಾಗಿ ನಡೆದು ಮುಕ್ತಾಯವಾಯಿತು. ಆ ದಿನ ಭರ್ಜರಿಯಾಗಿ ದಾಸೋಹಕ್ಕೆ ಏರ್ಪಾಡಾಯಿತು. ಎಲ್ಲರೂ ಬಂದು ಹೊಟ್ಟೆ ತುಂಬ ಊಟಮಾಡಿ ಹೋದರು. ಸಂಗ್ರಹವಾಗಿದ್ದ ಧಾನ್ಯ ಪದಾರ್ಥಗಳಲ್ಲಿ ಮಿಕ್ಕದ್ದು ಇನ್ನೂ ಯಥೇಚ್ಛವಾಗಿತ್ತು. ವ್ಯವಸ್ಥಾಪಕರು ಅವನ್ನು ಮಾರಿ ಬಂದ ಹಣದಿಂದ ಮಠಕ್ಕೆ ಒಂದಷ್ಟು ಜಮೀನನ್ನು ಕೊಳ್ಳುವ ಯೋಚನೆ ಮಾಡಿದರು. ಅದನ್ನು ಅಪ್ಪಾವರ ಬಳಿ ಹೇಳಿದರು. ಅಪ್ಪಾವರು ನಗುತ್ತಾ, ''ಈಗಿರೋ ಮಠದ ಹೊಲಾನೆ ಉಳೋರಿಲ್ಲದೆ ಖಾಲಿ ಬಿದ್ದಿದೆ. ಇನ್ನಷ್ಟು ಜಮೀನು ಕೊಂಡುಕೊಂಡು ಏನು ಮಾಡತೀರಿ? ಈಗಿರೋ ಹೊಲದಲ್ಲಿಯೆ ಕಳೆ ಬೆಳೆದುಕೊತಾವೆ. ಶಿವ ಕೊಟ್ಟ ಹೊಲಾನ ಹೀಂಗ ಬೀಳು ಬಿಟ್ಟುದೇನು ಚಲೋ ಅಲ್ಲ. ಮತ್ತೊಂದು ಹೊಲ ಯಾಕ?'' ಅಂದರು. ಕೇಳಿ ವ್ಯವಸ್ಥಾಪಕರು ಅವಕ್ಕಾದರು. ಏಕೆಂದರೆ ವಾಸ್ತವವಾಗಿ ಗಚ್ಚಿನ ಮಠಕ್ಕೆ ಸೇರಿದ್ದೆಂದು ಯಾವ ಹೊಲವೂ ಇರಲಿಲ್ಲ. ಅವರು ಪ್ರಶ್ನಾರ್ಥಕವಾಗಿ ಅಪ್ಪಾವರನ್ನು ನೋಡಿದರು. ಆಗ ಅವರು ವಿವರಿಸಿದರು, ''ಮನುಷ್ಯಾನ ಬದುಕೇ ಒಂದು ಹೊಲ. ಸರಿಯಾಗಿ ನೋಡಿಕೊಳ್ಳದೆ ಹೋದರೆ ಶಿಥಿಲವಾಗಿ ಬಿದ್ದು ಹೋಗುವಂತೆ, ಬೀಳು ಬಿಟ್ಟ ಹೊಲಾನೂ ಬೀಳು ಬಿಡುತ್ತದೆ. ದೇವರು ಎಲ್ಲರಿಗೂ ಬುದ್ದಿ ಕೊಟ್ಯಾನ. ಸರಿಯಾಗಿ ಬಳಸಿದರೆ ಬದುಕು ಬಂಗಾರವಾಗ್ತದೆ.''

ಹೇಗೋ ಸ್ವಲ್ಪ ಧೈರ್ಯ ತಂದುಕೊಂಡು ಕೆಲವು ಭಕ್ತರು ಕೇಳಿದರು, ''ಹಂಗಾರ ಈ ಉಳಿದ ಧಾನ್ಯ ಸಾಮಗ್ರಿಗಳನ್ನು ಏನ ಮಾಡೋದು ಅಪ್ಪಾವ್ರೇ?''

''ಮತ್ತೊಂದು ದಾಸೋಹ ಮಾಡ್ರಿ. ಮೊನ್ನೀ ದಾಸೋಹಕ್ಕೆ ಬರೀ ಲಿಂಗವಂತರನ್ನು ಮಾತ್ರ ಕರೆದಿದ್ದಿರಿ. ಬ್ಯಾರೆ ಜಾತಿಯವರನ್ನು ಕರೆದಿರಲಿಲ್ಲ. ಬಸವಪುರಾಣ ಕೇಳಿದ್ದನ್ನು ಸರಿಯಾಗಿ ಅರ್ಥಾನೂ ಮಾಡಿಕೊಂಡಿಲ್ಲ. ಅಣ್ಣ ಬಸವಣ್ಣ ಎಲ್ಲರಿಗೂ ಸೇರಿದವರಾಗಿದ್ದರು. ಎಲ್ಲರ ಹಿತನೂ ಬಯಸುತ್ತಿದ್ದರು. ಜಾತಿಭೇದ, ವರ್ಗಭೇದ ಇಲ್ಲದ ಸಮಾಜವನ್ನು ಕಟ್ಟುವ ಕನಸು ಅವರದು. ಈಗ ಮತ್ತೆ ದಾಸೋಹಕ್ಕೆ ವ್ಯವಸ್ಥಾ ಮಾಡಿ ಊರಿನ ಎಲ್ಲ ಜಾತಿಯವರನ್ನು ಕರೀರಿ'' ಎಂದು ಹೇಳಿದರು. ಅದರಂತೆ ದಾಸೋಹ ನಡೆಯಿತು. ಊರಿಗೆ ಊರೇ ಸಂತೋಷಪಟ್ಟಿತು, ತೃಪ್ತಿ ಹೊಂದಿತು.

ಒಂದು ಬೇಸಿಗೆ ಕಾಲ ದಿನದಿಂದ ದಿನಕ್ಕೆ ಬಿಸಿಲಿನ ಝಳ ಹೆಚ್ಚಾಗುತ್ತ, ಹೊರಗೆ ನೆಲದ ಮೇಲೆ ಕಾಲಿಟ್ಟರೆ ಬರೆ ಹಾಕಿದಂತಾಗುವಷ್ಟು ನೆಲ ಸುಡುತ್ತಿತ್ತು. ಅಪ್ಪಾವರನ್ನು ನೋಡಲು ಕೆಲವರು ಭಕ್ತರು ಮಠಕ್ಕೆ ಬಂದರು. ಪ್ರಸಾದ ಮಾಡಿಕೊಂಡು ಹೊರಟು ನಿಂತರು. ಎಲ್ಲರದೂ ಬರಿಗಾಲೆ. ಶಿವಯೋಗಿಗಳು, ''ಬಿಸಿಲು ಭಾಳ ಆಗೇದ. ಯಾರಿಗೂ ಚಪ್ಪಲಿ ಬ್ಯಾರೆ ಇಲ್ಲ. ಸ್ವಲ್ಪ ತಡೆದು ಬಿಸಿಲಿಳಿದು ತಂಪಾದ ಮೇಲೆ ಹೋಗಿರಿ'' ಎಂದರು. ಹೀಗೆ ಹೇಳುತ್ತಿದ್ದಂತೆ ಯಾರೋ ಒಬ್ಬ ಭಕ್ತ ತಲೆ ಮೇಲೆ ಟ್ರಂಕ್ ಹೊತ್ತು ಮಠದೊಳಗೆ ಬಂದ. ತಲೆ ಮೇಲಿಂದ ಟ್ರಂಕನ್ನು ಕೆಳಗಿಳಿಸಿ ನೆಲದ ಮೇಲಿಟ್ಟು, ಟ್ರಂಕು ತುಂಬ ಪಾದರಕ್ಷೆಗಳನ್ನು ತಂದಿರುವುದಾಗಿ ಹೇಳಿದ. ಮಠಕ್ಕೆ ಕೊಟ್ಟು ಹೋಗಲು ಬಂದುದಾಗಿ ತಿಳಿಸಿದ. ಶಿವಯೋಗಿಗಳು ಪ್ರಸನ್ನರಾಗಿ ಉದ್ಗರಿಸಿದರು, ''ಭಾಳ ಛಲೋ ಆತು ನೋಡು! ಶಿವಾನೇ ನಿನ್ನ ಕೂಡ ಪಾದರಕ್ಷೆ ಕಳಿಸಿದಾನ. ಈ ಭಕ್ತರು ಬರಿಗಾಲಲ್ಲಿ ಹೊರಟಿದ್ದರು, ಈ ಉರಿ ಬಿಸಿಲಾಗ. ಲಗೂನ ಕೊಡು ಎಲ್ಲರಿಗೂ. ಪಾದರಕ್ಷೆ ಹಾಕ್ಕೊಂಡು ಹೋಗಲಿ'' ಎಂದರು.

ಇಂಥದೇ ಇನ್ನೊಂದು ಪ್ರಸಂಗ. ಅದು ಚಳಿಗಾಲ, ಕೊರೆಯುವ ಚಳಿ. ಥಂಡಿಯಿಂದ ನಡುಗುತ್ತ ಮುದುಕನೊಬ್ಬ ಮಠಕ್ಕೆ ಬಂದ. ಕೃಶವಾದ ದೇಹ. ನಡೆಯಲು ತ್ರಾಣವಿಲ್ಲ. ಕಂಗಾಲಾಗಿ ನಿಂತ. ಅವನಿಗೆ ಅಪ್ಪಾವರು ಮೊದಲು ಬಿಸಿ ಬಿಸಿ ನೀರಿನ ಸ್ನಾನ ಮಾಡಿಸಿದರು. ನಂತರ ಊಟ ಮಾಡಿಸಿದರು. ಆತ ಮೂರು ದಿನ ಮಠದಲ್ಲೇ ಇದ್ದ. ಈ ಉಪಚಾರ ನಿತ್ಯ ನಡೆದ ಮೇಲೆ ಅವನಿಗೆ ಶಕ್ತಿ – ಲವಲವಿಕೆ ಬಂದವು. ಅಪ್ಪಾವರಿಗೆ ನಮಸ್ಕಾರ ಮಾಡಿ ಅಲ್ಲಿಂದ ಹೊರಟ. ಶಿವಯೋಗಿಗಳು ಅವನಿಗೆ ಒಂದು ಕಂಬಳಿ ಕೊಟ್ಟರು. ಪೂಜ್ಯರನ್ನು ಹಾಡಿ ಹರಸುತ್ತ ಆತ ಹೊರಟು ಹೋದ. ಅದೇ ದಿನ ಸಂಜೆ ಮಠಕ್ಕೆ ಕಂಬಳಿಗಳ ದೊಡ್ಡ ಗಂಟೇ ಬಂದು ಬಿತ್ತು. ಯಾರೋ ಭಕ್ತರು ಮಠಕ್ಕೆ ಕಳಿಸಿ ಕೊಟ್ಟಿದ್ದರು. ಅಪ್ಪಾವರು ನಗುತ್ತ ಎಲ್ಲರ ಮುಂದೆ ಹೇಳಿದರು: ''ನೋಡಿದಿರಾ, ಒಂದು ಕಂಬಳಿ ಕೊಟ್ಟುದ್ದಕ್ಕೆ ಎಷ್ಟು ಕಂಬಳಿ ಬಂದವು. ಶಿವ ಒಂದು ಕೈಯಲ್ಲಿ ತಗೊಂಡರೆ, ಹತ್ತು ಕೈಗಳಲ್ಲಿ ಕೊಡ್ತಾನೆ.''

ಬಡತನಕ್ಕಿಂತ ದೊಡ್ಡ ದುರದೃಷ್ಟ ಬೇರೆ ಇಲ್ಲ. ಅಂಬಿಗರ ಶಿವಪ್ಪ ಬಡತನವೆ ಮೈವೆತ್ತು ಬಂದಂತಿದ್ದ. ಮನೆ ಇಲ್ಲ. ಹೊಲ ಇಲ್ಲ. ಮನೆ ತುಂಬ ಮಕ್ಕಳು. ಶಿವಯೋಗಿಗಳ ಬಳಿಗೆ ಬಂದು ತಲೆಬಾಗಿ ನಿಂತ. ಏನೂ ಹೇಳದಿದ್ದರೂ ಶಿವಯೋಗಿಗಳಿಗೆ ಎಲ್ಲವೂ ಅರ್ಥವಾಯಿತು. ಅಡಿವೆಪ್ಪ ಮಾಸ್ತರರನ್ನು ಕರೆದರು. ''ಅಡಿವೆಪ್ಪಾ, ಇವಾಂಗೆ ನಮ್ಮ ಕಾಮಧೇನು ಆಕಳಾ ಕೊಟ್ಟು ಬಿಡು.'' ಅಪ್ಪಾವರದು ಒಂದೇ ಮಾತು. ಅದು ಆಗೇ ಬಿಡಬೇಕು. ಶಿವಪ್ಪನ ಕಡೆ ತಿರುಗಿ, ''ಶಿವಪ್ಪಾ ನಮ್ಮ ಕಾಮಧೇನು ಆಕಳಾನ ಮನೀಗೆ ಕರೆದುಕೊಂಡು ಹೋಗಿ ನೀನೇ ಇಟ್ಟುಕ್ಕೊಂಡುಬಿಡು. ಆಕಿ ಇದ್ದರೆ ನಿನ್ನನ್ನೂ ನಿನ್ನ ಮಕ್ಕಳು ಮೊಮ್ಮಕ್ಕಳು ಎಲ್ಲಾರನ್ನೂ ಸುಖವಾಗಿಡ್ತಾಳೆ'' ಎಂದು ಆಶೀರ್ವಾದ ಮಾಡಿದರು.

ಹುಬ್ಬಳ್ಳಿಯ ಮಹಾಜ್ಞಾನಿ, ಯೋಗಿ, ಸಿದ್ಧಾರೂಢರು ಒಮ್ಮೆ ಅಥಣಿ ಕಡೆಯ ಭಕ್ತರು ತಮ್ಮನ್ನು ನೋಡಲು ಬಂದರೆ ಹೇಳುತ್ತಿದ್ದರು, ''ನಿಮ್ಮಲ್ಲೆ ಶಿವಯೋಗಿಗಳನ್ನಿಟ್ಟುಕೊಂಡು ನನ್ನ ದರ್ಶನಕ್ಕೆ ಅಂತ ಯಾಕ ಬರ್ತೀರಪ್ಪಾ. ಶಾಸ್ತ್ರದ ಬಗ್ಗೆ ಏನಾದರೂ ಕೇಳೋದಿದ್ರ ಬರ್ರಿ ನನ್ನ ಕಡೀಗೆ. ಶಿವನನ್ನೇ ನೋಡಬೇಕು ಅಂತ ಅನಿಸಿದರೆ ಅಥಣಿಗೇ ಹೋಗ್ರಿ.''

ಹೀಗಿದ್ದರು ಅಥಣಿಯ ಮುರುಘೇಂದ್ರ ಶಿವಯೋಗಿಗಳು. ಅವರಿಗೆ ಬದುಕಿನದಷ್ಟೇ ಅಲ್ಲ , ಸಾವಿನದೂ ಬಂಧನ ಇರಲಿಲ್ಲ. ಇಹಲೋಕವನ್ನು ತ್ಯಜಿಸುವ ದಿನಾನೂ ಗೊತ್ತು ಮಾಡಿ, ಏಪ್ರಿಲ್ ೨೩ (೧೯೨೧) ಎಂದು ಹೇಳಿದ್ದರು.

ಆ ದಿನ ಇಷ್ಟಲಿಂಗ ಪೂಜೆ ಮಾಡುತ್ತಾ ಕುಳಿತಿದ್ದ ಹಾಗೆಯೇ ತದೇಕಚಿತ್ತ, ತದೇಕದೃಷ್ಟಿ ಅಂಗೈ ಮೇಲಿನ ಲಿಂಗದ ಮೇಲೆ ನೆಟ್ಟಿದ್ದು ನೆಟ್ಟ ಹಾಗೆ, ಅವರು ಅದೇ ಲಿಂಗದಲ್ಲಿ ಒಂದಾಗಿಬಿಟ್ಟರು. ಆ ಬೆಳಕು, ಅವರ ಮುಖದ ತೇಜಸ್ಸು ಒಂದಾಗಿ ಬೆಳಕೋ ಬೆಳಕಾಯಿತು.